ಮಹಿಳೆಯರಿಗೆ ಈ ಪ್ರಶಿಕ್ಷಣ ಕೊಡಲಾಗಿದೆ ? ಹಾಗೂ ಮಾನ್ಯಮಂತ್ರಿಗಳು ಈ ದಿಸೆಯಲ್ಲಿ ಸೂಕ್ತವಾದ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಉತ್ತರ ಕೊಟ್ಟಿದ್ದಾರೆ. ಯಾವ ದಿಸೆಯಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ ? ಆಲ್ಲಿಗೆ ಇನ್ನೂ ವಿದ್ಯುಚ್ಛಕ್ತಿಯನ್ನು ಪೂರೈಕೆ ಮಾಡದೇ ಇರುವುದಕ್ಕೆ ಕಾರಣ ಏನು ಎಂಬ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೇ, ಈ ಸಂಸ್ಥೆ 1976ರಲ್ಲಿ ನೊಂದಾಯಿಸಲ್ಪಟ್ಟಿದೆ. ಮೊದಲು ಈ ಸಂಸ್ಥೆಯವರು ಆವಲಕ್ಕಿ ತಯಾರು ಮಾಡುವುದಕ್ಕೆ 10 ಸಾವಿರ ರೂಪಾಯಿಗಳನ್ನು ಹಾಗೂ ಫೈಬರ್ ಇಂಡಸ್ಟ್ರೀಸ್‌ಗೆ 9 ಸಾವಿರ ರೂಪಾಯಿಗಳನ್ನು ಪಡೆದುಕೊಂಡಿದ್ದು. ಇದನ್ನು ಬಡ್ಡಿ ಸಮೇತ ವಾಪಸ್ ಕೊಟ್ಟಿರುತ್ತಾರೆ. ಮುಂದೆ ಖಾದಿ ಉತ್ಪಾದನೆಯ ಸಲುವಾಗಿ ಇವರಿಗೆ 1 ಲಕ್ಷ ರೂ. ಪಾಯಿಗಳನ್ನು ಕೊಡಲಾಗಿದೆ. ಇದು 1983-84ರ ಜೂನ್ ತಿಂಗಳಲ್ಲಿ ಬಿಡುಗಡೆಯಾಗಿದೆ. ಇವರು ಎನ್.ಎಂ.ಸಿ. ಮಿಷನ್ ತೆಗೆದುಕೊಂಡು ಬಂದು ಹಾಕಿದ್ದಾರೆ. ಇಲ್ಲಿಗೆ ಈ ತಿಂಗಳ ಅಂತ್ಯದೊಳಗೆ ವಿದ್ಯುಚ್ಛಕ್ತಿ ಸರಬರಾಜು ಆಗುತ್ತದೆ. ಇವರಿಗೆ ವಿದ್ಯುತ್ ಒದಗಿಸುವುದರಲ್ಲಿ ಸ್ವಲ್ಪ ತಡವಾಗಿದೆ. ಈ ತಿಂಗಳ ಅಂತ್ಯದೊಳಗೆ ವಿದ್ಯುತ್ ದೊರೆಯುವುದರಿಂದ ಕೆಲಸ ಪ್ರಾರಂಭವಾಗುತ್ತದೆ. ಮತ್ತೆ "ಸೂಕ್ತ ಕ್ರಮ" ಎಂದರೆ ಈ ಕೈಗಾರಿಕೆ ಪ್ರಾರಂಭ ಆಗುವ ದಿಸೆಯಲ್ಲಿ ತೆಗೆದುಕೊಂಡ ಕಾರ್ಯಕ್ರಮಗಳು ಎಂದು ಅರ್ಥ.

ಡಾ॥ ಹೆಗ್ಗಪ್ಪ.—ಈ ಘಟಕಕ್ಕೆ ಮೊದಲೇ ವಿದ್ಯುಚ್ಛಕ್ತಿಯನ್ನು ಪೂರೈಸಲಾಗಿದೆ. ವಿದ್ಯುಚ್ಛಕ್ತಿ ಬಿಲ್ಲು ನಾಲ್ಕೈದು ಸಾವಿರ ರೂಪಾಯಿಗಳನ್ನು ತುಂಬದೇ ಇರುವುದರಿಂದ ವಿದ್ಯುಚ್ಛಕ್ತಿ ಕಟ್ ಮಾಡಿದ್ದಾರೆ. ಅಲ್ಲಿ ವಿದ್ಯುಚ್ಛಕ್ತಿ ಇಲ್ಲದೇ ಇರುವುದರಿಂದ ಉತ್ಪಾದನೆ ಇಲ್ಲ. ಅದು ಟೋಟಲ್ ಬಂದ್ ಆಗಿದೆ. ಅಲ್ಲಿ 25 ಸಾವಿರ ರೂಪಾಯಿಗಳನ್ನು ಏತಕ್ಕೆ ಖರ್ಚು ಮಾಡಿದ್ದಾರೋ ಗೊತ್ತಿಲ್ಲ. ಅಲ್ಲಿಗೆ ತಮ್ಮ ಅಧಿಕಾರಿಗಳನ್ನು ಯಾರನ್ನಾದರೂ ಕಳುಹಿಸಿ ಅದನ್ನು ಪ್ರಾರಂಭ ಮಾಡಿಸಿ ಸರಿಯಾದಂಥ ರೀತಿಯಲ್ಲಿ ನಡೆಯುವಂತೆ ನೋಡಿಕೊಳ್ಳಬೇಕು. ಎಲೆಕ್ಟ್ರಿಸಿಟಿ ಚಾರ್ಜ್ ತುಂಬದೇ ಇರುವ ಬಗ್ಗೆ ಡಿ.ಡಿ,ಸಿ ಮೀಟಿಂಗ್ ನಲ್ಲಿ, 20 ಪಾಯಿಂಟ್ ಪ್ರೋಗ್ರಾಮ್ ಮೀಟಿಂಗ್‌ನಲ್ಲಿ ಹೇಳಿದ್ದೇನೆ. ಎಲೆಕ್ಟ್ರಿಸಿಟಿ ಬಿಲ್ ತುಂಬಿಸಿ ಅದನ್ನು ಪ್ರಾರಂಭಿಸಲಿಕ್ಕೆ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರು ಸರ್ಕಾರದ ಗಮನವೆನ್ನು ಈಗ ಸೆಳೆದಿದ್ದಾರೆ, ಅಲ್ಲಿಗೆ ವಿದ್ಯುಚ್ಛಕ್ತಿ ಒದಗಿಸುವ ಬಗ್ಗೆ, ಮತ್ತು ಹಣ ತುಂಬುವ ಬಗ್ಗೆ ನಮ್ಮ ಅಧಿಕಾರಿಗಳನ್ನು ಕಳುಹಿಸಿ ವ್ಯವಸ್ಥೆ ಮಾಡಿಸುತ್ತೇನೆ.

Security of Employment for Drivers working in private Institutions.

Sri Prathapchandra Shetty (Coondapur)—

609 (1679) Will the Minister for Labour and Wakf be pleased to state:—

(a) the number of Drivers of different types cf vehicles in the State (Grade-wise and District-wise particulars);

(b) whether there is any scheme before the Government to give security of employment for Drivers who are working in private Institutions;

(c) if so, the details of the said scheme ?

ಶ್ರೀ ಪ್ರತಾಪಚಂದ್ರ ಶೆಟ್ಟಿ,—ಅಧ್ಯಕ್ಷರೇ, ನಾನು 1679ನೇ ಪ್ರಶ್ನೆ ಕೇಳುವುದರ ಜೊತೆಗೆ ಅದರ ಉತ್ತರ ಬರಲಿಲ್ಲ ಎಂದು ತಿಳಿಸಲು ವಿಷಾದಿಸುತ್ತೇನೆ.

Sri Azeez sait.—Sir, there is little confusion so far as this question is concerned. The question has not reached my office. However, I will try to answer this question. There are different categories of drivers like, drivers of three-wheelers, two wheelers and other workers like the cleaners, workshop maintenance etc., are

covered under the Industrial Disputes Act and minimum Wages Act. At present, I don't have district-wise figures and I shall provide the same. There are very few ausociations in this line. If there are any proslems if they make a representation to the Department, we will deal with them under law. But these workers are covered under the Industrial Disputes Act and minimum wages Act.

ಶ್ರೀ ಪ್ರತಾಪಚಂದ್ರ ಶೆಟ್ಟಿ.—ಅಧ್ಯಕ್ಷರೇ, ಇಲ್ಲಿ ವಿವಿಧ ದರ್ಜೆಯ ಡ್ರೈವರ್ ಸಂಖ್ಯೆಯನ್ನು ಜಿಲ್ಲಾವಾರು ಕೇಳಿದ್ದೇನೆ.

ಅಧ್ಯಕ್ಷರು.—ಲೇಬರ್ ಡಿಪಾರ್ಟ್‌ಮೆಂಟಿನವರು ಆ ಸಂಖ್ಯೆಯಿಂದ ಒದಗಿಸಿಲ್ಲ ಎಂದು ತಿಳಿಸುತ್ತಿದ್ದಾರೆ.

ಶ್ರೀ ಪ್ರತಾಪಚಂದ್ರ ಶೆಟ್ಟಿ.—ಅಧ್ಯಕ್ಷರೇ, ಅವರ ಉದ್ಯೋಗದ ರಕ್ಷಣೆಯ ಬಗ್ಗೆ ಕೇಳುತ್ತಿದ್ದೇನೆ.

ಅಧ್ಯಕ್ಷರು.—ಯಾರಾದರೂ ರೆಪ್ರಸೆಂಟ್ ಮಾಡಿದರೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ.

ಶ್ರೀ ಪ್ರತಾಪಚಂದ್ರ ಶೆಟ್ಟಿ.—ಅಧ್ಯಕ್ಷರೇ, ಹೊಟ್ಟೆನೋವು ಇರುವವರು ಡಾಕ್ಟರ್ ಹತ್ತಿರ ಹೋದರೆ ಔಷಧಿ ಕೊಡುತ್ತಾರೆ. ಹೊಟ್ಟೆನೋವು ಇರುವವರು ಮನೆಯಲ್ಲಿ ಕುಳಿತುಕೊಂಡರೆ ಡಾಕ್ಟರು ಔಷಧಿ ಕೊಡಲಿಕ್ಕೆ ಆಗುವುದಿಲ್ಲ. ಅವರಿಗೆ ಬೋನಸ್ ಸಿಕ್ಕಿಲ್ಲ, ಸಂಬಳ ಸಿಕ್ಕಿಲ್ಲ ಎಂದರೆ...He can refer all those individual matters to the Assistant Labour Commissioner and the concerned Labour Gfficer. Nothing privents him from doing this.

ಶ್ರೀ ಪ್ರತಾಪಚಂದ್ರ ಶೆಟ್ಟಿ.—ಹೊಟ್ಟೆನೋವು ಬಂದಾಗ ಈ ಮಂತ್ರಿಗಳು ಇರಲಿಲ್ಲ. ಅವರು ಹೊಟ್ಟೆನೋವು ಬಂದಿದೆ ಎಂದು ಬರುವ ಹೊತ್ತಿಗೆ ಈ ಸರ್ಕಾರ ಇರಬಹುದು, ಇಲ್ಲದೇ ಇರಬಹುದು. ಆದರೆ ಜನಸಾಮಾನ್ಯರಿಗೆ, ಡ್ರೈವರ್‌ಗಳಿಗೆ ಉದ್ಯೋಗ ರಕ್ಷಣೆ ಬೇಕಾಗುತ್ತದೆ. ಸರ್ಕಾರದಲ್ಲಿರತಕ್ಕ ಡ್ರೈವರ್‌ಗಳಿಗೆ ಯಾವರೀತಿ ರಕ್ಷಣೆ ಕೊಡುತ್ತೀರೋ ಅದೇ ರೀತಿ ಇವರಿಗೂ ರಕ್ಷಣೆ ಕೊಡಬೇಕಾಗುತ್ತದೆ. ಉಳುವವನಿಗೆ ಭೂಮಿ ಹೇಗೆ ಕೊಟ್ಟಿದ್ದೇವೆಯೋ, ಫ್ಯಾಕ್ಟರಿಯಲ್ಲಿ ಕೆಲಸ ಮಾಡತಕ್ಕವರಿಗೆ, ಹೋಟೆಲಿನಲ್ಲಿ ಕೆಲಸ ಮಾಡತಕ್ಕವರಿಗೆ ಹೇಗೆ ರಕ್ಷಣೆಯನ್ನು ಕೊಟ್ಟಿದ್ದೀರೋ ಅದೇ ರೀತಿ ಡ್ರೈವರ್‌ಗಳಿಗೆ ಉದ್ಯೋಗದಲ್ಲಿ ರಕ್ಷಣೆ ಕೊಡಬೇಕಾಗುತ್ತದೆ. ಹೊಟ್ಟೆನೋವು ಬಂದವರು ಡಾಕ್ಟರ್ ಹತ್ತಿರ ಬರಲಿಲ್ಲ ಎಂದು ಹೇಳಿ ಈ ರೀತಿಯ ಉತ್ತರ ಕೊಟ್ಟು ನುಣಚಿಕೊಳ್ಳುವುದನ್ನು ನಾವು ನಿರೀಕ್ಷಿಸಿರಲಿಲ್ಲ. ಜವಾಬ್ದಾರಿಯುತವಾದ ಸದನದಲ್ಲಿ ಮಾನ್ಯ ಮಂತ್ರಿಗಳು ಜವಾಬ್ದಾರಿಯಿಂದ ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

Sri Azeez Sait.—There are various Acts namely E. S. I. Act, Provident Fund Act etc., But every Act has certain lemits. If there are more than twenty workers in a category, they will be covered under the above aets. If they are less than twenty in number, they will not de covered under the Factories Act, Shops and Establishments Act. etc., But they will be given protection under the Industrial Disputes Act and Minimum wages Act.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಸದಸ್ಯರು ಈ ಪ್ರಶ್ನೆ ಕೇಳಿರತಕ್ಕ ಉದ್ದೇಶ ಎಂದರೆ ನಾವು ಕೂಡ ಅನುಭವದಿಂದ ನೋಡಿದ ಪ್ರಕಾರ ಯಾರು ಖಾಸಗಿ ಬಸ್ಸುಗಳಲ್ಲಿ ನೌಕರಿಗೊಂಡು ಕೆಲಸ ಮಾಡುತ್ತಾರೋ ಅವರಿಗೆ ಸೇವಾ ಭದ್ರತೆ ಇರುವುದಿಲ್ಲ. ಅವರಿಗೆ ಶೋಷಣೆ ಯಾವರೀತಿ ನಡೆಯುತ್ತದೆ ಎಂದರೆ, ಅವರು ರಾತ್ರಿ ಬೊಂಬಾಯಿಯಿಂದ ಹೊರಟು ಬೆಳಿಗ್ಗೆ ಮಂಗಳೂರಿಗೆ ಬಂದರೆ, ಮತ್ತೆ ಬೆಳಿಗ್ಗೆ

ಅದೇ ಬಸ್ಸಿನಲ್ಲಿ ಹೊರಡಬೇಕಾಗಿರುತ್ತದೆ. ಈ ರೀತಿ ಅವರು ಕೆಲಸ ಮಾಡಬೇಕಾಗಿರುವುದರಿಂದ ಹೆಚ್ಚಿನ ಆಕ್ಸಿಡೆಂಟ್‌ಗಳು ಆಗುತ್ತವೆ. ಅವರು ಆ ರೀತಿ ಕೆಲಸ ಮಾಡುವುದಿಲ್ಲ ಎಂದರೆ ಅವರನ್ನು ಕೆಲಸದಿಂದ ತೆಗೆಯುತ್ತಾರೆ. ಆದ್ದರಿಂದ, ಇದರ ಬಗ್ಗೆ ವಿಶೇಷವಾದ ಮಾಹಿತಿಯನ್ನು ತಾವು ತರಿಸಬೇಕಾಗುತ್ತದೆ. 20 ಜನ ಇದ್ದರೆ ಇದು ಅನ್ವಯವಾಗುವುದಿಲ್ಲ ಎಂದು ಸುಮ್ಮನೆ ಇದ್ದರೆ ಆಗುವುದಿಲ್ಲ. ಅವರು ಸತತವಾಗಿ ಶೋಷಣೆಗೊಳಗಾಗುತ್ತಿರುತ್ತಾರೆ. ಡ್ರೈವರ್‌ಗಳಿಗೆ ಶೋಷಣೆಯನ್ನು ತಪ್ಪಿಸಲಿಕ್ಕೆ, ಅವರಿಗೆ ಒಂದು ಭದ್ರತೆಯನ್ನು ಕೊಡಲಿಕ್ಕೆ, ಮಾಹಿತಿಯನ್ನು ತರಿಸಿ ವಿಚಾರ ಮಾಡಿ ಸೂಕ್ತ ಪರಿಹಾರ ಮಾಡುತ್ತೀರಾ ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಮೊನ್ನೆ ಉಡುಪಿ ವಲಯದಲ್ಲಿ ಸ್ಟ್ರೈಕ್ ಕೂಡ ಆಯಿತು. ಆ ಒಂದು ಹಿನ್ನೆಲೆಯಲ್ಲಿ ಮಾನ್ಯ ಸದಸ್ಯರು ಪ್ರಶ್ನೆ ಕೇಳುತ್ತಿದ್ದಾರೆ.

ಶ್ರೀ ಅಜೀಜ್ ಸೇಠ್.—ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರು ಹಿಂದೆ ಮಂತ್ರಿಗಳಾಗಿದ್ದರು. ಅವರಿಗೆ ಚೆನ್ನಾಗಿ ಅನುಭವ ಇದೆ. ಅಲ್ಲದೇ ಅವರು ಅಡ್ವೊಕೇಟ್. ಇವೊತ್ತು ನಾನು ಸುಮ್ಮನೆ ಏನನ್ನೂ ಹೇಳುತ್ತಿಲ್ಲ. ಇವೊತ್ತು ಕಾನೂನು ಇದೆ, ನಿಯಮಗಳು ಇವೆ. ರಕ್ಷಣೆ ಪಡೆಯುವವರಿಗೆ ಮಾತ್ರ ರಕ್ಷಣೆ ಸಿಕ್ಕುತ್ತದೆ. ಮಕ್ಕಳು ಅಳುವವರೆಗೂ ತಾಯಿ ಹಾಲು ಕೊಡುವುದಿಲ್ಲ. ಜನರಲ್ ಮೋಟಾರ್ ಟ್ರಾನ್ಸ್‌ಪೋರ್ಟ್ ವರ್ಕರ್ಸ್ ಅಸೋಸಿಯೇಷನ್ ಮತ್ತೆ ಇನ್ನೂ ಕೆಲವು ಯೂನಿಯನ್‌ಗಳನ್ನು ಮಾಡಿಕೊಂಡಿದ್ದಾರೆ. Many times, certain cases come before us. We have given all protection. There are organisations like INTUC, AITUC etc., There are drivers, mechanics, Cleaners, helpers and we aretrying to help them. There are certain limits under the various and I cannot change those Acts. The Government of India have Acts to change those Acts.

ಶ್ರೀ ಎಂ. ಎಸ್. ಕೃಷ್ಣನ್.—ಮೋಟಾರ್ ಟ್ರಾನ್ಸ್‌ಪೋರ್ಟ್ ವರ್ಕರ್ಸ್ ಆ್ಯಕ್ಟ್ ಪ್ರಕಾರ ಖಾಸಗಿ ಬಸ್ ಡ್ರೈವರ್‌ಗಳಿಗೆ, ಕಂಡಕ್ಟರ್‌ಗಳಿಗೆ, ಕ್ಲೀನರ್‌ಗಳಿಗೆ, ಕೆಲವು ಅನುಕೂಲಗಳನ್ನು ಮಾಡಿಕೊಡಬೇಕೆಂದು ಇರುವುದು ತಮಗೆ ಗೊತ್ತಿದೆಯೇ ? ಅದನ್ನು ಈ ಪ್ರೈವೇಟ್ ಟ್ರಾನ್ಸ್‌ಪೋರ್ಟ್ ವರ್ಕರ್ಸ್ ಏನು ಇದ್ದಾರೆ ಅವರಿಗೆ ಮಾಡಿಕೊಟ್ಟಿಲ್ಲ ಎನ್ನುವುದು ಗೊತ್ತಿದೆಯೇ ? ಅದನ್ನು ಮಾಡಿಕೊಡಲಿಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

Sri Azzee Sait.—I am not denying it. They are all covered under the Industrial Disputes Act, Provident Fund Act, Minimum Wages Act.,

ಶ್ರೀ ಪ್ರತಾಪಚಂದ್ರ ಶೆಟ್ಟಿ.—ಮಿನಿಮಮ್ ವೇಜಸ್ ಆ್ಯಕ್ಟ್ ಅಪ್ಲೈ ಆಗುತ್ತದೆಯೇ ? ಯಾವ ಯಾವ ಡ್ರೈವರ್‌ಗಳಿಗೆ ಮಿನಿಮಮ್ ವೇಜಸ್ ಎಷ್ಟೆಷ್ಟು ಕೊಡಬೇಕು ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

Sri Azzee Sait.—Sir, inspite of the fact that this question has not reached my office, I am trying to answer this question out of my knowledge. I have been trying to place the facts. I have already said that they are covered under the Industrial Disputes Act and the Minimum Wages Act. If the hon'ble Member wants the details of the Minimum wages, I dont have the details at present. I will get the notification and place it on the Table of the House.